ಶತಮಾನೋತ್ಸವ ವಿಶೇಷ ಪುರವಣಿ

# ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಆಚರಣೆ 2007-08

**ಶತಮಾನೋತ್ಸವ ಸಮಿತಿ**

**2006ರಲ್ಲಿ ಸುಬ್ರಹ್ಮಣ್ಯ ಸಭಾದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಶತಮಾನೋತ್ಸವವನ್ನು ಆಚರಿಸಲು ಹೊಸ ಶತಮಾನೋತ್ಸವ ಕಮಿಟಿಯನ್ನು ನೇಮಿಸಲು ನಿಶ್ಚಯಿಸಲಾಯಿತು. ಅದರಂತೆ ಈ ಕೆಳಗಿನ ನಿರ್ದೇಶಕರನ್ನು ಶತಮಾನೋತ್ಸವ ಸಮಿತಿಗೆ ಆರಿಸಲಾಯಿತು. ಎಮ್. ಆರ್. ವಾಸುದೇವ ರಾವ್- ಅಧ್ಯಕ್ಷರು, ಡಾ। ಎ.ಪಿ.ಕೃಷ್ಣ- ಕಾರ್ಯದರ್ಶಿ, ಸಂತೋಷ್ ಕುಮಾರ್ ಯು.- ಜತೆ ಕಾರ್ಯದರ್ಶಿ, ಶ್ರೀಮತಿ ಸುಮಂಗಲಾ ಪ್ರಭಾಕರ್-ಜತೆ ಕಾರ್ಯದರ್ಶಿ, ಕೆ. ಪ್ರದೀಪ್‌ರಾವ್ ಕೋಶಾಧಿಕಾರಿ ಮತ್ತು ವೇದಿಕೆ ಸಮಿತಿಯ ಅಧ್ಯಕ್ಷರು, ವಿನೋದ್‌ರಾವ್-ಸ್ವಾಗತ ಸಮಿತಿ ಅಧ್ಯಕ್ಷರು, ಚೇತನ್ ಶರ್ಮ-ಕ್ರೀಡಾ ಸಮಿತಿ ಅಧ್ಯಕ್ಷರು, ಬಿ.ಎಸ್.ಸುರೇಶ್-ಪ್ರಚಾರ ಸಮಿತಿ ಅಧ್ಯಕ್ಷರು, ಎಮ್.ಎಸ್.ರಘುನಾಥ ರಾವ್ - ಸ್ಮರಣ ಸಂಚಿಕೆ ಅಧ್ಯಕ್ಷರು, ಭಾಸ್ಕರ್ ರಾವ್ ಬಿ.-ಧಾರ್ಮಿಕ ಕಾರ್ಯಕ್ರಮ ಸಮಿತಿ ಅಧ್ಯಕ್ಷರು, ಪಿ.ಸಂಜಯ್‌ಕುಮಾರ್ ರಾವ್- ಸಾಂಸ್ಕೃತಿಕ ಸಮಿತಿ ಅಧ್ಯಕ್ಷರು ಇವರುಗಳಲ್ಲದೆ ಸುಬ್ರಹ್ಮಣ್ಯ ಸಭೆಯ ಕೆಳಗಿನ ಪದಾಧಿಕಾರಿಗಳಾದ ಎನ್.ಕೆ. ಜಗನ್ನಿವಾಸ ರಾವ್ ಅಧ್ಯಕ್ಷರು, ಸಿ.ಎಸ್.ರಾವ್ ಉಪಾಧ್ಯಕ್ಷರು ಇವರನ್ನೂ ಸೇರಿಸಿ ಕೊಳ್ಳಲಾಯಿತು.**

# ಶತಮಾನೋತ್ಸವ ಕಾರ್ಯಕ್ರಮಗಳು

ಶತಮಾನೋತ್ಸವ ಸಮಿತಿಯು ಮಾಡಿದ ಪ್ರಥಮ ಕೆಲಸವೆಂದರೆ ನಮ್ಮ ಕುಲಗುರುಗಳಾದ ಶೃಂಗೇರಿ ಶಾರದಾ ಪೀಠಾಧೀಶ್ವರರ ದಿವ್ಯ ಸಾನಿಧ್ಯಕ್ಕೆ ಪೂರ್ಣ ತಂಡದೊಂದಿಗೆ ತೆರಳಿ ತಮ್ಮ ಸಂಕಲ್ಪವನ್ನು ಅರಿಕೆ ಮಾಡಿಕೊಂಡರು.

ಇದಕ್ಕೆ ಪೂರಕವಾಗಿ ಪ್ರತೀ ತಿಂಗಳು ಹುಣ್ಣಿಮೆಯ ಆಸುಪಾಸಿನಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಸುವ ಸಂಕಲ್ಪ ಮಾಡಿ ಬಹು ಸಂಖ್ಯೆಯ ಸಮಾಜ ಬಾಂಧವರ ಒಗ್ಗೂಡುವಿಕೆಯಿಂದ, ಪಾರಾಯಣದಿಂದ ಕೂಟಪ್ರಾರ್ಥನೆಯಿಂದ, ಇತ್ಯಾದಿ ಕಾರ್ಯಕ್ರಮಗಳಿಂದ ದೇವತಾನುಗ್ರಹಕ್ಕೆ ಪಾತ್ರರಾದರು.

ಶತಮಾನೋತ್ಸವ ಸಂಭ್ರಮದ ಅಂಗವಾಗಿ ಹಲವು ಜನಹಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿವಿದೆಡೆಗಳಲ್ಲಿ ಹಮ್ಮಿಕೊಂಡಿತ್ತು. ಇದರ ಔಪಚಾರಿಕ ಶುಭಾರಂಭವನ್ನು ಸನ್ಮಾನ್ಯ ಅನಂತಕೃಷ್ಣ ಅಧ್ಯಕ್ಷರು ಕರ್ನಾಟಕ ಬ್ಯಾಂಕ್ ಇವರು ಜನವರಿ ತಿಂಗಳ 7 ರಂದು ನೆರವೇರಿಸಿದರು.

18-02-2007ನೇ ಆದಿತ್ಯವಾರ ಉಚಿತ ರಕ್ತವರ್ಗೀಕರಣ ಶಿಬಿರವನ್ನು ಮಾನ್ಯ ಎನ್. ಯೋಗೀಶ ಭಟ್, ಶಾಸಕರು ಸುಬ್ರಹ್ಮಣ್ಯ ಸಭಾ, ಮಂಗಳೂರಿನಲ್ಲಿ ಉದ್ಘಾಟಿಸಿದರು. ಈ ಶಿಬಿರವನ್ನು ಹಲವೆಡೆ ಒಂದೇ ದಿನ ಆಯೋಜಿಸುವ ಸಂಕಲ್ಪದ ಪರಿಣಾಮವಾಗಿ ಪುತ್ತೂರಿನ ರೋಟರಿ ಸಭಾ ಭವನ, ಸುಳ್ಯ ಜ್ಯೋತಿ ಆಸ್ಪತ್ರೆಯಲ್ಲೂ ಶಿಬಿರವು ನಡೆಯಿತು. ಪುತ್ತೂರಿನ ಶಿಬಿರವನ್ನು ಶಾಸಕಿ ಶ್ರೀಮತಿ ಶಕುಂತಳ ಶೆಟ್ಟಿಯವರು ಉದ್ಘಾಟಿಸಿದರು. ಈ ಕಾರ್ಯಕ್ರಮಗಳಲ್ಲಿ ಲಯನ್ಸ್ ಕ್ಲಬ್, ಲಯನೆಸ್ ಕ್ಲಬ್, ರೋಟರಿ ಕ್ಲಬ್, ಮಿತ್ರಸಮಾಜ, ಯುವ ಸಮಾಜದಂತಹ ಸಂಘಸಂಸ್ಥೆಗಳ ಸಹಕಾರವನ್ನು ಪಡೆಯಲಾಗಿತ್ತು.

ಫೆಬ್ರವರಿ 11ನೇ ತಾರೀಕು ಚಿಕ್ಕಪುಟ್ಟ ಮಕ್ಕಳಿಂದ ಹಿಡಿದು ವೃದ್ದರವರೆಗೆ ಸೇರಿದ ಜನರು ಉಲ್ಲಾಸ ಯಾತ್ರೆಯನ್ನು ಕೈಗೊಂಡರು. ಬೆಳಿಗ್ಗೆ ಸಭಾದಿಂದ ಹೊರಟ ಬಸ್ಸು ಅಂತಾಕ್ಷರಿ, ಯಕ್ಷಗಾನ ಭಾಗವತಿಗೆ ವಿವಿಧ ಮನರಂಜನೆಯ ಕಾರ್ಯಕ್ರಮ, ಸೊಗಸಾದ ಉಪಹಾರ ಸೇವನೆ ಇತ್ಯಾದಿಯೊಂದಿಗೆ ಕಮಲಶಿಲೆ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ತಲುಪಿತು. ಇಲ್ಲಿ ದೇವಿದರ್ಶನ, ಪೂಜೆ, ಗುಹೆ ಸಂದರ್ಶನ, ಸಮೃದ್ಧ ಪ್ರಸಾದ ಭೋಜನ ವಿವಿಧ ಆಟೋಟ ಸ್ಪರ್ಧೆಯನ್ನು ಮುಗಿಸಿ, ಸಾಯಂಕಾಲ 8-00ಗಂಟೆಗೆ ಹಿಂದಿರುಗಿತು.

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿ ನಮ್ಮ ಸಮಾಜದ ಅತ್ಯುತ್ತಮ ಹವ್ಯಾಸಿ ಯಕ್ಷಗಾನ ತಂಡವಾಗಿ ರೂಪುಗೊಂಡು, ಮೈಸೂರಿನ ಸ್ಥಾನಿಕ ಸಮಾಜದ ಸಹಯೋಗದೊಂದಿಗೆ 25-02-2007ರಂದು ''ಸುದರ್ಶನ ವಿಜಯ'' ಎಂಬ ಯಕ್ಷಗಾನ ಪ್ರದರ್ಶನವನ್ನು ಮೈಸೂರಿನಲ್ಲಿ ನಡೆಸಿತು.

11-03-2007 ರಂದು ಶ್ರೀ ಸುಬ್ರಹ್ಮಣ್ಯ



ಸುಬ್ರಹ್ಮಣ್ಯ ಸಭಾ ಕಟ್ಟಡ - 2008ರಲ್ಲಿ

ಸಭಾವತಿಯಿಂದ ದೊಡ್ಡರಂಗ ಪೂಜೆಯನ್ನು ಪಾವಂಜೆ ದೇವಸ್ಥಾನದಲ್ಲಿ ನಡೆಸಲಾಯಿತು.

ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಂಡು ವಾಹನದ ಹೊಗೆ ಮಾಲಿನ್ಯದಿಂದಾಗಿ ಬರಬಹುದಾದ ಆರೋಗ್ಯ ಸಮಸ್ಯೆಗಳು ಅವುಗಳನ್ನು ನಿವಾರಿಸುವ ಮುಂಜಾಗ್ರತಾ ಕ್ರಮಗಳು ಎಂಬಿತ್ಯಾದಿ ವಿಷಯಗಳನ್ನೊಳಗೊಂಡ ಕರಪತ್ರವನ್ನು ಮುದ್ರಿಸಿ ಮಂಗಳೂರಿನ ಜನತೆಗೆ ತಲುಪಿಸಿತು. 18-03-2007ರಂದು ಲಯನೆಸ್ ಸಂಸ್ಥೆಯ ಸಹಯೋಗದೊಂದಿಗೆ ಉಚಿತ ವಾಯುಮಾಲಿನ್ಯ ತಪಾಸಣಾ ಶಿಬಿರವನ್ನು ಸಭಾ ವಠಾರದಲ್ಲಿ ಹಮ್ಮಿಕೊಂಡಿತು. 22-04-2007ರಂದು ಅಜ್ಜಾವರ, ಸುಳ್ಯದಲ್ಲಿ ನಮ್ಮ ಸಮಾಜದ ಪುರೋಹಿತ ಸಮ್ಮೇಳನ ಹಾಗೂ ಶ್ರೀ ಶಂಕರ ಜಯಂತಿಯನ್ನು ನಡೆಸಲಾಯಿತು.

01-05-2007ರಂದು ಸಾಯಂಕಾಲ ಇತರ ಬ್ರಾಹ್ಮಣ ವರ್ಗದ ಸಂಸ್ಥೆಗಳನ್ನು ಜೊತೆಗೆ ಸೇರಿಸಿಕೊಂಡು ಶ್ರೀ ಶಂಕರಾಚಾರ್ಯ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಸುಂದರ ಸಮಾರಂಭದಲ್ಲಿ ಶಂಕರ ತತ್ವ ಸಿದ್ಧಾಂತವನ್ನು ಪ್ರಚಾರ ಪಡಿಸುವ ನಿಟ್ಟಿನಲ್ಲಿ ಹೆಚ್ಚಿನ ಕೊಡುಗೆಯನ್ನಿತ್ತ ಯಾಜಿ ಡಾ। ಎಚ್. ನಿರಂಜನ್ ಭಟ್,ನಿಟಿಲಾಪುರ ಕೃಷ್ಣಮೂರ್ತಿ, ಎಚ್. ನರಸಿಂಹಮೂರ್ತಿ, ಡಾ। ಜಿ. ಎನ್. ಭಟ್ ಅವರನ್ನು ಆತ್ಮೀಯವಾಗಿ ಡಾ। ಸಿ. ಆರ್. ಬಲ್ಲಾಳರ ಆಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು.

ಮೇ ಕೊನೆಯವಾರದಲ್ಲಿ ಕಾಂತಾವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿಕೊಟ್ಟು ಅಲ್ಲಿನ ಮಕ್ಕಳಿಗೆ ಉಪಯುಕ್ತ ಪುಸ್ತಕ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಿ ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಪ್ರೀತಿಯನ್ನು ಗಳಿಸಿಕೊಂಡಿತು.

ಜೂನ್ 24ರಂದು ಉಭಯ ಜಿಲ್ಲಾ ಚದುರಂಗ ಸ್ಪರ್ಧೆಯನ್ನು ಮಂಗಳೂರಿನಲ್ಲಿ ಹಮ್ಮಿಕೊಂಡಿತು. ದಿನವಿಡೀ ನಡೆದ ಸ್ಪರ್ಧೆಯಲ್ಲಿ ಸುಮಾರು 100ರಷ್ಟು ಸಂಖ್ಯೆಯ ಆಬಾಲವೃದ್ಧ ಕ್ರೀಡಾಪಟುಗಳು ಭಾಗವಹಿಸಿದ್ದರು.

ಅಗೋಸ್ತು 5 ರಂದು ವನರಕ್ಷಣೆಯೂ ನಮ್ಮ ಕರ್ತವ್ಯವೆಂದು ನೆನಪಿಸಿಕೊಳ್ಳುತ್ತಾ ಒಂದು ಬಸ್ಸು ಜನ ಪ್ರಗತಿ ರಮಣೀಯವಾದ ಕೊಕ್ರಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ತೆರಳಿ ಅಲ್ಲಿ ನೆರದಿದ್ದ ನಮ್ಮ ಸಮಾಜಬಾಂಧವರೊಂದಿಗೆ ದೇವಸ್ಥಾನಕ್ಕೆ ಹೋಗುವ ದಾರಿಯ ಇಕ್ಕೆಲದಲ್ಲಿ ವಿವಿಧ ಸಸ್ಯ ಜಾತಿಯ ಗಿಡಗಳನ್ನು ನೆಟ್ಟಿತು.

26-08-2007ರಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಜ್ಯೋತಿಷ್ಕರೊಂದಿಗೆ ಸಂವಾದ' ಕಾರ್ಯಕ್ರಮವನ್ನು ನಡೆಸಿತು. ಇದರಲ್ಲಿ ಸುಕುಮಾರ ಆಲಂಪಾಡಿಯವರು ಜ್ಯೋತಿಷ್ಯದ ಬಗ್ಗೆ ಒಂದು ಹೊಸ ಬೆಳಕನ್ನು ಚೆಲ್ಲಿದರು. ಇದರಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಎಂ. ಆರ್. ವಾಸುದೇವ್, ಗೌರಿ ದಿವಾಕರ್, ಅಡೂರು ಸಂಜೀವ ರಾವ್ ಅವರು ಸಹಕರಿಸಿದರು.

02-09-2007ರಂದು ಜಗತ್ತಿಗೆ ಜ್ಞಾನದ ಬೆಳಕನ್ನು ನೀಡಿದ ಶ್ರೀ ಕೃಷ್ಣನ ಹುಟ್ಟುಹಬ್ಬವನ್ನು ಲಯನ್ಸ್ ಸೇವಾ ಮಂದಿರ, ಮಂಗಳೂರು ಇಲ್ಲಿ ಆಚರಿಸಲಾಯಿತು. ಬೆಳಿಗ್ಗೆ 9-00 ರಿಂದ ಸಾಯಂಕಾಲ 6-00ರ ವರೆಗೆ ವಿವಿಧ ಸಾಂಸ್ಕೃತಿಕ ವಿಷಯಗಳ ಸಮ್ಮಿಶ್ರಣದಲ್ಲಿ ಈ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಉಜಿರೆಯಲ್ಲಿ ನಮ್ಮ ಸಭಾದ ಶತಮಾನೋತ್ಸವದ ಆಚರಣೆಯ ಸಂಭ್ರಮವನ್ನು ಇತರರೊಂದಿಗೆ ಹಂಚುವ ನಿಟ್ಟಿನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆಯಂದು ಸಾರ್ವಜನಿಕ ಅನ್ನಸಂತರ್ಪಣೆಗೆ ಬೇಕಾಗುವ ಅಕ್ಕಿಯನ್ನು ಕೊಡಲಾಯಿತು. ಇದರ ನೈತೃತ್ವವನ್ನು ಪ್ರಚಾರ ಸಮಿತಿಯ ಆಧ್ಯಕ್ಷರಾದ ಬಿ. ಎಸ್. ಸುರೇಶ್ ಹಾಗೂ ಸುಬ್ರಹ್ಮಣ್ಯ ಬ್ರಾಹ್ಮಣ ಸಭಾ ಬೆಳ್ತಂಗಡಿ ಇದರ ಅಧ್ಯಕ್ಷರಾದ ಅರುಣ್ ಕುಮಾರ್ ವಹಿಸಿದ್ದರು.

ಶೃಂಗೇರಿ ಪೀಠಾಧಿಪತಿಗಳ ಚಾತುರ್ಮಾಸ ಸಂದರ್ಭದಲ್ಲಿ ನಮ್ಮ ಸಮಾಜ ಬಾಂಧವರು ದೂರದ ಮುಂಬಯಿ ನಗರಕ್ಕೆ ಗುರು ವಂದನೆಗಾಗಿ ಇತರ ಸಂಘಗಳ ಸಮಾಜ ಬಾಂಧವರೊಂದಿಗೆ ತೆರಳಿದ್ದು ಶತಮಾನೋತ್ಸವದ ಸಂಭ್ರಮಕ್ಕೆ ಗರಿ ಮೂಡಿಸಿತು.

23-09-2007ರಂದು ಕಾಸರಗೋಡು ಶಿವ ಬ್ರಾಹ್ಮಣ ಸಭಾದ ವಾರ್ಷಿಕೋತ್ಸವವು ಸುಬ್ರಹ್ಮಣ್ಯ ಸಭಾದ ಸಾಂಸ್ಕೃತಿಕ ವೈಭವದ ಮೆರಗು, ನೃತ್ಯ ಹಾಗೂ ಯಕ್ಷಗಾನ ತಾಳಮದ್ದಳೆಯ ಜಂಟಿ ಮೇಳೈಸುವಿಕೆಯಿಂದ ಯಶಸ್ವಿಯಾಗಿ ನಡೆಯಿತು.

07-10-2007ರಂದು ಶತಮಾನೋತ್ಸವ ಸಮಿತಿ ಮತ್ತು ಶಿವಬ್ರಾಹ್ಮಣ ಸಭಾ ಕಾಸರಗೋಡು ಇದರ ಜಂಟಿ ಸಂಯೋಜನೆಯಲ್ಲಿ ಕೂಡ್ಲು ಗೋಪಾಲಕೃಷ್ಣ ಶಾಲೆಯಲ್ಲಿ ಉಚಿತ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಶಿಬಿರ ಜರಗಿತು. ಇದಕ್ಕೆ ಡಾ। ಬಿ. ಎಚ್. ಶ್ರೀಮತಿ ರಾವ್, ಪ್ರಾಂಶುಪಾಲರು, ಯೇನಪೋಯ ದಂತ ಮಹಾವಿದ್ಯಾಲಯ ಮತ್ತು ಇತರ ವೈದ್ಯಕೀಯ ಪರಿಣತರ ಸಹಕಾರ ಪ್ರಶಂಸನೀಯವಾಗಿತ್ತು. ಶ್ರೀಮತಿ ಕವಿತಾ ಶಾಸ್ತ್ರಿಯವರ ಮುಂದಾಳುತನದಲ್ಲಿ ನಡೆದ ವ್ಯಕ್ತಿತ್ವ ವಿಕಸನ ಮಾರ್ಗದರ್ಶನ ಶಾಲಾ ವಿದ್ಯಾರ್ಥಿಗಳ ಸರ್ವೋತೋಮುಖ ಬೆಳವಣಿಗೆಗೆ ಪೂರಕವಾಗಿತ್ತು.

28-10-2007ರಂದು ಅದ್ದೂರಿಯಿಂದ ನಾಡಹಬ್ಬ ಆಚರಿಸಲಾಯಿತು. ವಿಷ್ಣು ಸಹಸ್ರನಾಮ, ದೇವಿಸಹಸ್ರನಾಮ ಪಾರಾಯಣ, ವಿವಿಧ ಸ್ಪರ್ಧೆಗಳು, ಕಲಾತ್ಮಕವಾದ ನಾಟ್ಯವೈಭವ, ಯಕ್ಷಗಾನ, ರುಚಿಯಾದ ಸಹ ಭೋಜನದೊಂದಿಗೆ ಸಂಪನ್ನಗೊಂಡಿತು.

ನವೆಂಬರ್ 11 ತಾರೀಕಿನಂದು ದೀಪಾವಳಿ ಹಬ್ಬವನ್ನು ಸಾಮೂಹಿಕವಾಗಿ ಆಚಾರಿಸಲಾಯಿತು ಅಂದು ಪ್ರತಿಯೊಬ್ಬರೂ ಮನೆಯಿಂದ ಬರುವಾಗ ತಾವೇ ಸ್ವತಃ ತಯಾರಿಸಿದ ವಿವಿಧ ತಿಂಡಿ ತಿನಸುಗಳನ್ನು ಹೊತ್ತುತಂದು ಅದನ್ನು ಹಂಚಿ ತಿನ್ನುವಾಗ ಸಿಗುವ ಮಧುರ ಅನುಭವದಿಂದ ಎಲ್ಲರೂ ಧನ್ಯರಾಗಿದ್ದರು. ಅಂದು ಸಮೃದ್ಧ ಭೋಜನದ ಜೊತೆಗೆ ಮನತಣಿಸುವ ನೃತ್ಯ, ಸಂಗೀತವೈಭವ, ಪಟಾಕಿಶಬ್ದಗಳ ಝೇಂಕಾರ, ವರ್ಣ ವಿನ್ಯಾಸ ಇವೆಲ್ಲ ಶತಮಾನೋತ್ಸವ ಸಂಭ್ರಮದ ಕಿರೀಟಕ್ಕೆ ಬಣ್ಣದ ಗರಿ ನೀಡಿತು.

17-11-2007ರಂದು ಸರಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ಉಜಿರೆ ಇಲ್ಲಿ ಉಚಿತ ದಂತ ತಪಸಣಾ ಶಿಬಿರ ಆಯೋಜಿಸಲಾಗಿತ್ತು. ಇಂಡಿಯನ್ ಡೆಂಟಲ್ ಅಸೋಸಿಯೇಷನ್, ಎ. ಬಿ. ಶೆಟ್ಟಿ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸಾಯನ್ಸ್, ಮಂಗಳೂರು. ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ, ಲಯನ್ಸ್ ಮತ್ತು ಲಯನೆಸ್ ಕ್ಲಬ್, ಬೆಳ್ತಂಗಡಿ, ಸರಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ಉಜಿರೆ ಈ ಎಲ್ಲಾ ಸಂಸ್ಥೆಗಳ ಸಹಯೋಗದಿಂದ ಶಿಬಿರವು ಸಂಘಟಿತವಾಗಿತ್ತು, ಜನವರಿ 06-01-2008 ಒಂದು ಅವಿಸ್ಮರಣೀಯ ದಿನ. ಆ ದಿನ ನಮ್ಮ ಸಮಾಜದವರ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರಗಿತು. ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ

(...7ನೇ ಪುಟಕ್ಕೆ)